**ಓಎಸ್ ನಂಃ 87/2016**
**ಡಿ.ಡಬ್ಲೂಃ 1**

**ಸಾಕ್ಷಿಗೆ ದಿನಾಂಕ 09-12-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಮ್.ಎಸ್.ಎಸ್.  ವಕೀಲರಿಂದ

ನಾನು ಹುಟ್ಟಿ ಬೆಳೆದಿದ್ದು ಮಾಡುಬೂಳ್ ಗ್ರಾಮದಲ್ಲಿ ಎಂದರೆ ಸರಿ.  ನೀವು ಮಾಡುಬೂಳ್ ಗ್ರಾಮದವರಲ್ಲ ನೀವು ಕೇವಲ ಮಾಡುಬೂಳ್ ಗ್ರಾಮದ ಅಳಿಯ ಎಂದರೆ ಸರಿಯಲ್ಲ. ನೀವು ಮಾಡುಬೂಳ್ ಗ್ರಾಮದವರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.  ಸರ್ವೆ ನಂಬರ್ 30 ಇದರ ವಿಸ್ತೀರ್ಣ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಯಲ್ಲಪ್ಪ ತಂದೆ ಕಂಟಪ್ಪ ಇವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ್ 30ರಲ್ಲಿ ನಿಮಗೆ 2 ಎಕ್ರೆ 33 ಗುಂಟೆ ಇದೆ ಎಂದು ಹೇಳುತ್ತಿದ್ದೀರಿ ಅದು ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿ ಸರಕಾರದವರು ಇನಾಮ್ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಾನು ಸದರಿ ಇನಾಮ್ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.  ಸರ್ವೆ ನಂಬರ್ 30ರಲ್ಲಿ ಒಂದು ಹೈವೆ ರಸ್ತೆ ಹಾದು ಹೋಗುತ್ತದೆ ಎಂದರೆ ಸರಿ.

ಈ ಹಂತದಲ್ಲಿ  ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.